ಎಲ್ಲಾ ಸ್ಪಿಲ್ ಓವರ್ ಎಂದು, ಮತ್ತೊಂದು ವರ್ಷ ಕಳೆದರೂ ಅದು ಸ್ಪಿಲ್ ಓವರ್‌ಗೆ ಹೋಗುತ್ತದೆ. ಇಲ್ಲಿ ಕೇವಲ ನಾವು ಅಂಗನವಾಡಿ ಕಟ್ಟಡದ ಬಗ್ಗೆ ಮಾತನಾಡುವುದಕ್ಕಾಗುತ್ತಿಲ್ಲ. ಪ್ರಾಥಮಿಕ ಶಾಲೆಗಳ ಕಟ್ಟಡಗಳ ರಿಪೇರಿಗಾಗಿ ಬೇರೆ ದುಡ್ಡು ಇದೆ, ಆದರೆ ಅಂಗನವಾಡಿ ಕಟ್ಟಡಗಳಿಗೆ ಯಾರನ್ನೂ ಕೇಳಿದರೂ ದುಡ್ಡು ಕೊಡುತ್ತಿಲ್ಲ. ನಿನ್ನೆ ನಮ್ಮ ಮಾನ್ಯ ಹನುಮೇಗೌಡರವರು ಕೂಡ ಎಂ.ಪಿ.ಗಳ ಅನುದಾನದ ಬಗ್ಗೆ ಮಾತನಾಡಿದ್ದಾರೆ. ಅವರು ಎಂ.ಪಿ.ಗಳ ಅನುದಾನ ಏನಾಗುತ್ತದೆ, ಏಜೆಂಟರ್ ಮುಖೇನ ಯಾವ ರೀತಿ ನಡೆಯುತ್ತಿದೆ ಎಂಬುದನ್ನು ಬಹಳ ಚೆನ್ನಾಗಿ ಹೇಳಿದರು. ಎಂ.ಪಿ. ಅನುದಾನದ ವಿಚಾರ ದೇವತೆಗಳಿಗೆ ಗೊತ್ತು, ಅದು ನಮಗೆ ಗೊತ್ತಾಗುವುದಿಲ್ಲ. ಸರ್ಕಾರಕ್ಕೆ ಇವತ್ತಿಲ್ಲ ನಾಳೆ ಗೊತ್ತಾಗುತ್ತದೆ, ಇವತ್ತು ನಾವು ಇಲ್ಲಿ ಏನು ಹೇಳಿದರೂ ಪ್ರಯೋಜನವಿಲ್ಲ.

ಶ್ರೀಮತಿ ಮೋಟಮ್ಮ:— ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಹೇಳಿದಂತೆ, ಬಜೆಟ್‌ನಲ್ಲಿ ಹಾಗೂ ಪೂರಕ ಬಜೆಟ್‌ನಲ್ಲಿ ನಾವು ಹಣವನ್ನು ಇಟ್ಟುಕೊಂಡಿದ್ದೇವೆ. ನಾವು ಮೊದಲು ಇದಕ್ಕೆ ಆಧ್ಯತೆ ಕೊಟ್ಟು ಕಟ್ಟಿಸುತ್ತೇವೆ. ಆದರೆ ಇದಕ್ಕೆ ಮಾನ್ಯ ಸದಸ್ಯರು ಆಧ್ಯತೆ ಕೊಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು :— ಆಧ್ಯತೆಯ ಮೇಲೆ ಕಟ್ಟಿಸಿಕೊಡುತ್ತೇವೆಂದು ಅವರು ಹೇಳಿದರಲ್ಲ, ಬಿಡಿ.

ಶ್ರೀಮತಿ ಮೋಟಮ್ಮ:— ಮಾನ್ಯ ಬೈರೇಗೌಡರವರೆ, ಇದಕ್ಕೆ ಆಧ್ಯತೆ ಕೊಡಬೇಕೇ ಅಥವಾ ಬೇರೆಯದಕ್ಕೆ ಬೇರೆಯವರು ಒತ್ತಡ ತಂದರೆ, ಅದಕ್ಕೆ ಕೊಡಬೇಕೆ ಎಂಬುದನ್ನು ನಿರ್ಧರಿಸುವವರು ಎಂಪಿಗಳೇ ಎಂದು ನಾನು ಅದಕ್ಕೆ ಹೇಳಿದ್ದು. ನಾವು ಹಣ ಕೊಡುತ್ತಿದ್ದೇವೆಂದು ಹೇಳುತ್ತಿದ್ದೇನೆ. ಮಾನ್ಯ ಸದ್ಯಸ್ಯರು ಈ ರೀತಿ ಇರುವಂಥ ಕೇಂದ್ರಗಳಿಗೆ ಆಧ್ಯತೆ ಕೊಡಬೇಕಾಗುತ್ತದೆ.

ಅಧ್ಯಕ್ಷರು :— ಮುಂದಿನ ಪ್ರಶ್ನೆ. ಮಾನ್ಯ ಷಡಾಕ್ಷರಿಯವರೆ, ಮಾನ್ಯ ಸಚಿವರು ಮದ್ರಾಸ್‌ನಿಂದ ದೂರವಾಣಿ ಮಾಡಿ ತಿಳಿಸಿರುತ್ತಾರೆ, ಅವರಿಗೆ ವಿಮಾನ ಮಿಸ್ ಆಗಿದೆಯಂತೆ, ಅದ್ದರಿಂದ ಬರಲಿಕ್ಕೆ ಆಗಲಿಲ್ಲವಂತೆ, ಆದ್ದರಿಂದ ನಿಮ್ಮ ಪ್ರಶ್ನೆಯನ್ನು ನಾಳೆ ತೆಗೆದುಕೊಳ್ಳೋಣ. ಮುಂದಿನ ಪ್ರಶ್ನೆ ಮಾನ್ಯ ಪಾಪಣ್ಣನವರದು.

ಹುಣಸೂರು ತಾಲ್ಲೂಕಿನಲ್ಲಿ ಮೆಕ್ಕೆಜೋಳ ಖರೀದಿ.

485(4521) ಶ್ರೀ ಪಾಪಣ್ಣ ವಿ. (ಹುಣಸೂರು) :— ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಣಸೂರು ತಾಲ್ಲೂಕಿನಲ್ಲಿ ಸರ್ಕಾರದಿಂದ ಮೆಕ್ಕೆಜೋಳವನ್ನು ಖರೀದಿಸಲು ಖರೀದಿ ಕೇಂದ್ರವನ್ನು ಹುಣಸೂರಿನಲ್ಲಿ ಇಲ್ಲಿಯವರೆಗೆ ಪ್ರಾರಂಭಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಖರೀದಿ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ. ಡಿ.ಬಿ. ಇನಾಂದಾರ್ (ಆಹಾರ ಮತ್ತು ನಾಗರಿಕ ಸರಬರಾಜು ರಾಜ್ಯ ಸಚಿವರು) :—

ಅ) ಬಂದಿದೆ.

ಆ) ಎಲ್ಲಾ ಊರುಗಳಲ್ಲಿ ಖರೀದಿ ಕೇಂದ್ರಗಳನ್ನು ತೆರೆಯಲು ಸಾಧ್ಯವಿಲ್ಲ. ಹುಣಸೂರು ತಾಲ್ಲೂಕಿನ ರೈತರ ಹತ್ತಿರದ ಖರೀದಿ ಕೇಂದ್ರವಾದ ಪಿರಿಯಾಪಟ್ಟಣಕ್ಕೆ ಹೋಗಬೇಕಾಗುತ್ತದೆ.

ಶ್ರೀ ವಿ.ಪಾಪಣ್ಣ :— ಮಾನ್ಯ ಅಧ್ಯಕ್ಷರೆ, ನನ್ನ (ಅ) ಪ್ರಶ್ನೆಗೆ ಉತ್ತರದಲ್ಲಿ "ಬಂದಿದೆ" ಎಂದು ಉತ್ತರಿಸಿದ್ದಾರೆ. ಹುಣಸೂರಿನಲ್ಲಿ ಎಫ್.ಸಿ.ಐ. ಗೋಡನ್ ಇದೆ. ಇಲ್ಲಿ ಒಂದು ಖರೀದಿ ಕೇಂದ್ರ ತೆರೆಯಬೇಕೆಂದು ಕೃಷಿ ಸಚಿವರು ಹೇಳಿದ್ದರು. ಆದರೆ, ಪಿರಿಯಾಪಟ್ಟಣದಲ್ಲಿ ತೆರೆದಿದ್ದಾರೆ. ಹುಣಸೂರಿನಲ್ಲಿ ನಾವು ಮೆಕ್ಕೆಜೋಳ ಬೆಳೆಯುತ್ತೇವೆ, ಹಾಗೂ ನಮಗೆ ಗೋಡನ್ ಸೌಲಭ್ಯ ಕೂಡ ಇದೆ. ಪಿರಿಯಾಪಟ್ಟಣದಲ್ಲಿ ಜಾಸ್ತಿ ಬೆಳೆಯಬಹುದು, ಆದರೆ ನಮ್ಮ ಹುಣಸೂರಿನ ಪಕ್ಕದಲ್ಲಿ ಹೆಗ್ಗಡದೇವನ ಕೋಟೆ ಇದೆ. ಕೆ.ಆರ್ ನಗರ ಇದೆ, ಗೋಡನು ಕೂಡ ಇದೆ. ಹೀಗಿದ್ದರೂ ನಾವು ಬೆಲೆದಂಥ ಮಾಲನ್ನು ಪಿರಿಯಾಪಟ್ಟಣಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ಮಾರಾಟ ಮಾಡಬೇಕು, ಪುನ: ಅದನ್ನು ನಮ್ಮ ಹುಣಸೂರಿನ ಗೋಡನ್‌ನಲ್ಲಿ ತಂದು ಹಾಕುತ್ತಾರೆ. ಇದು ಯಾವ ರೀತಿ ಸರಿ ಎಂಬುದನ್ನು ನೀವೇ ಹೇಳಿ ಸ್ವಾಮಿ? ಅಲ್ಲಿ ಗೋಡಾನ್ ಇಲ್ಲ, ಆದರೂ ಅಲ್ಲಿ ಖರೀದಿ ಕೇಂದ್ರ ತೆರೆದಿದ್ದೀರಿ, ನಮ್ಮಲ್ಲಿ ಎಲ್ಲಾ ಸೌಲಭ್ಯವಿದ್ದರೂ ಏಕೆ ಖರೀದಿ ಕೇಂದ್ರ ತೆರೆಯಲಿಲ್ಲ?

ಶ್ರೀ ಡಿ.ಬಿ. ಇನಾಂದಾರ್ :— ಆಲ್ಲಿಗೆ ಬರುವ ಆವಕ ನೋಡಿ ಖರೀದಿ ಕೇಂದ್ರ ತೆಗೆಯಲಿಕ್ಕೆ ಪ್ರಯತ್ನಿಸುತ್ತೇವೆ. ಮಾರುಕಟ್ಟೆಯಲ್ಲಿ ಯಾವ ಪ್ರಮಾಣದಲ್ಲಿ ಆವಕ ಬರುತ್ತದೆಂಬುದನ್ನು ನೋಡಿ ನಾವು ಈ ಕ್ರಮ ಕೈಗೊಳ್ಳಬೇಕಾಗುತ್ತದೆ. ಏಕೆಂದರೆ, ಕನಿಷ್ಟ 500 ಟನ್ ಆವಕ ಬರಬೇಕಾಗುತ್ತದೆ. ಪ್ರತಿಯೊಂದು ತಾಲ್ಲೂಕಿನಲ್ಲಿ ಖರೀದಿ ಕೇಂದ್ರವನ್ನು ತೆರೆಯಲಿಕ್ಕೆ ಆಗುವುದಿಲ್ಲ.

ಶ್ರೀ ವಿ. ಪಾಪಣ್ಣ:— ಮಾನ್ಯ ಸಚಿವರು ಎಲ್ಲಾ ಊರುಗಳಲ್ಲಿ ಖರೀದಿ ಕೇಂದ್ರಗಳನ್ನು ತೆರೆಯಲು ಸಾಧ್ಯವಿಲ್ಲ ಎನ್ನುವ ಉತ್ತರ ಕೊಟ್ಟಿದ್ದಾರೆ, ಇದು ಸತ್ಯ. ಮಂಡ್ಯದವರು ಬಂದು ಮೆಕ್ಕೇಜೋಳಕ್ಕೆ ಖರೀದಿ ಕೇಂದ್ರವನ್ನು ಮಂಡ್ಯದಲ್ಲಿಯೇ ತೆರೆಯಿರಿ ಎಂದು ಯಾರೂ ಹೇಳುವುದಿಲ್ಲ. ಅವರು ಕೇಳುವುದು ಸಕ್ಕರೆ ಕಾರ್ಖಾನೆಗೆ ಮಾತ್ರ. ನಮ್ಮ ಊರಿನಲ್ಲಿ ನಾವು ಮೆಕ್ಕೇಜೋಳ ಬೆಳೆದಿದ್ದರಿಂದ ನಾವು ಖರೀದಿ ಕೇಂದ್ರ ತೆರೆಯಿರಿ ಎಂದು ಕೇಳುತ್ತಿದ್ದೇನೆ. ದಯಮಾಡಿ ತಾವು ವಿಚಾರ ಮಾಡಿ, ನಾವು ಬೆಳೆದಂಥ ಮಾಲನ್ನು ಅಲ್ಲಿಗೆ ಹೋಗಿ ಮಾರಾಟ ಮಾಡಿದರೂ, ಪುನ: ಆ ಮಾಲು ನಮ್ಮ ಊರಿನ ಗೋಡನ್‌ಗೆ ಬರುತ್ತದೆಂದರೆ ಹೇಗೆ?

ಶ್ರೀ ಡಿ.ಬಿ. ಇನಾಂದಾರ್:— ಮಾರುಕಟ್ಟೆಯಲ್ಲಿ ಬರುವ ಆವಕವನ್ನು ನೋಡಿ ಅವಶ್ಯಕವಿದ್ದರೆ ನಾವು ಖರೀದಿ ಕೇಂದ್ರ ತೆರೆಯುತ್ತೇವೆಂದು ನಾನು ಈಗಾಗಲೇ ಹೇಳಿದ್ದೇನೆ.

ಶ್ರೀ ವಿ. ಪಾಪಣ್ಣ:— ಸ್ವಾಮಿ ದಯಮಾಡಿ ನನ್ನ ಪ್ರಶ್ನೆ ಅರ್ಥಮಾಡಿಕೊಳ್ಳಿ. ಹುಣಸೂರಿನಲ್ಲಿ ಖರೀದಿ ಕೇಂದ್ರ ತೆರೆಯುವ ಬಗ್ಗೆ ನಾನು ಪ್ರಶ್ನೆ ಕೇಳಿದ್ದೇನೆ. ನನ್ನ ರೈತ ಪಿರಿಯಾಪಟ್ಟಣಕ್ಕೆ ಮಾಲನ್ನು ತೆಗೆದುಕೊಂಡು ಹೋಗಲಿಲ್ಲವೆಂದರೆ ಅವಕ ಯಾವ ರೀತಿಯಾಗುತ್ತದೆ? ಪಿರಿಯಾಪಟ್ಟಣದಲ್ಲಿ ಹೆಚ್ಚಿನ ಬೆಳೆಯಿರುವುದರಿಂದ ಅಲ್ಲಿ ಈ ಕೇಂದ್ರ ತೆರೆದಿದ್ದೀರಿ ಅದು ಸರಿ. ಆದರೆ ಹುಣಸೂರಿನಲ್ಲಿ ಎಲ್ಲಾ ಸೌಲಭ್ಯವಿದ್ದರೂ ಏಕೆ ತೆರೆಯಲಿಲ್ಲ? ನಮ್ಮಲ್ಲಿ ಎಲ್ಲಾ ಸೌಲಭ್ಯವಿದ್ದರೂ ನಾನು ಪಿರಿಯಾಪಟ್ಟಣಕ್ಕೆ ಮಾಲನ್ನು ತೆಗೆದುಕೊಂಡು ಹೋಗಬೇಕು ಎಂದರೆ ಏನರ್ಥ? ದಯಮಾಡಿ ಇದನ್ನು ಮಾಡಿಕೊಡಬೇಕು.

ಶ್ರೀ ಡಿ.ಬಿ. ಇನಾಂದಾರ್:— ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಮಾರುಕಟ್ಟೆಗೆ ಬರತಕ್ಕಂಥ ಆರೈವಲ್ಸ್‌ನ್ನು ನೋಡಿಕೊಂಡು ಖರೀದಿ ಕೇಂದ್ರಗಳನ್ನು ಸ್ಥಾಪನೆ ಮಾಡತಕ್ಕಂಥ ಒಂದು ಪದ್ಧತಿಯನ್ನು ನಾವು ಅನುಸರಿಸುತ್ತಾ ಬಂದಿದ್ದೇವೆ. ಇದೇ ರೀತಿಯಾಗಿ ಹುಣಸೂರು ತಾಲ್ಲೂಕಿನಲ್ಲಿಯೂ ಕೂಡ ೫೦೦ ಟನ್‌ಗಿಂತ ಜಾಸ್ತಿ ಆರೈವಲ್ಸ್ ಬಂದರೆ ಖರೀದಿ ಕೇಂದ್ರವನ್ನು ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡಿತ್ತೇನೆ.

ಶ್ರೀ ವಿ. ಪಾಪಣ್ಣ:— ಹುಣಸೂರು ತಾಲ್ಲೂಕಿನಲ್ಲಿ ಇವತ್ತಿನ ದಿವಸ ಕೇಂದ್ರವನ್ನು ಪ್ರಾರಂಭ ಮಾಡಿದರೆ ಮಾತ್ರ ಆರೈವಲ್ಸ್ ಎಷ್ಟು ಬರುತ್ತದೆ ಎಂಬುದನ್ನು ತಿಳಿಸುಕೊಳ್ಳುವುದಕ್ಕೆ ಸಾಧ್ಯ. ಖರೀದಿ ಕೇಂದ್ರವನ್ನು ಸ್ಥಾಪನೆ ಮಾಡದೇ ಆರೈವಲ್ಸ್ ಇಷ್ಟೇ ಬರುತ್ತದೆ ಎಂದು ಹೇಗೆ ಗೊತ್ತಾಗುತ್ತದೆ?

ಅಧ್ಯಕ್ಷರು:— ಅಲ್ಲಿ ಎಲ್ಲಾ ರೀತಿಯ ಅನುಕೂಲ ಇರುವುದರಿಂದ ಮೊದಲು ಖರೀದಿ ಕೇಂದ್ರವನ್ನು ಪ್ರಾರಂಭಮಾಡಿ ಆ ನಂತರ ಆರೈವಲ್ಸ್ ಬಂದೇ ಬರುತ್ತದೆ.

ಶ್ರೀ ವಿ. ಪಾಪಣ್ಣ:— ಹುಣಸೂರು ತಾಲ್ಲೂಕಿನಲ್ಲಿ ಎಲ್ಲಾ ರೀತಿಯಾದ ಅನುಕೂಲಗಳು ಇವೆ.

ಶ್ರೀ ಡಿ.ಬಿ. ಇನಾಂದಾರ್ :— ಮಾನ್ಯ ಅಧ್ಯಕ್ಷರೆ, ಅನುಕೂಲ ಇರತಕ್ಕಂಥ ಎಲ್ಲಾ ಕಡೆ ಖರೀದಿ ಕೇಂದ್ರವನ್ನು ಪ್ರಾರಂಭ ಮಾಡುವುದಕ್ಕೆ ಸಿಬ್ಬಂದಿ ಕೊರತೆ ಇದೆ. ಎಫ್.ಸಿ.ಐ.ನವರು ನಮ್ಮ ರಾಜ್ಯಕ್ಕೆ ಕ್ವಾಲಿಟಿ ಇನ್‌ಸ್ಪೆಕ್ಟರ್‌ರವರನ್ನು ಕಳುಹಿಸಿಕೊಟ್ಟಿದ್ದಾರೆ. ಇವತ್ತಿನ ದಿವಸ ನಮ್ಮಲ್ಲಿರತಕ್ಕಂಥ ಕ್ವಾಲಿಟಿ ಇನ್‌ಸ್ಪೆಕ್ಟರ್ ಎಷ್ಟು ಜನರಿದ್ದಾರೆ ಎಂಬುದನ್ನು ನೋಡಿಕೊಂಡು ಅಡ್ಜಸ್ಟ್ ಮಾಡಬೇಕಾಗುತ್ತದೆ. ಇವತ್ತಿನ ದಿವಸ ಮೆಕ್ಕೇಜೋಳ ಮತ್ತು ಭತ್ತ, ರಾಗಿ ಹಾಗೂ ಸಜ್ಜೆ, ಈ ಎಲ್ಲಾ ಕೃಷಿ ಉತ್ಪನ್ನಗಳನ್ನು ಪ್ರೊಕ್ಯೂರ್ ಮಾಡಬೇಕು ಎನ್ನತಕ್ಕಂಥ ವಿಚಾರ ಸರ್ಕಾರದ ಮುಂದೆ ಇದೆ. ಆದ್ದರಿಂದ ಯಾವ್ಯಾವ ಜಾಗದಲ್ಲಿ ಆರೈವಲ್ಸ್ ಜಾಸ್ತಿ ಇದೆ ಎಂಬುದನ್ನು ನಾವು ನೋಡಿಕೊಂಡು ಖರೀದಿ ಕೇಂದ್ರವನ್ನು ಪ್ರಾರಂಭ ಮಾಡುತ್ತೇವೆ.

ಅಧ್ಯಕ್ಷರು :— ಹುಣಸೂರು ತಾಲ್ಲೂಕಿನಲ್ಲಿಯೂ ಕೂಡ ಒಂದು ಖರೀದಿ ಕೇಂದ್ರವನ್ನು ಪ್ರಾರಂಭ ಮಾಡಿ.

ಶ್ರೀ ಬೈರೇಗೌಡ :— ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಏನೆಂದರೆ, ಪ್ರತಿ ತಾಲ್ಲೂಕಿನಲ್ಲಿಯೂ ಯಾವ್ಯವ ಬೆಳೆ ಎಷ್ಟೆಷ್ಟು ಉತ್ಪತ್ತಿ ಆಗುತ್ತದೆ ಎನ್ನತಕ್ಕಂಥ ಮಾಹಿತಿ ಸರ್ಕಾರದ ಹತ್ತಿರ ಇರುತ್ತದೆ. ಆದರೆ, ಆರೈವಲ್ಸ್ ನೋಡಿಕೊಂಡು ಖರೀದಿ ಕೇಂದ್ರವನ್ನು ಪ್ರಾರಂಭಮಾಡುತ್ತೇವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಇವತ್ತಿನ ದಿವಸ ಮೊದಲು ಖರೀದಿ ಕೇಂದ್ರವನ್ನು ಪ್ರಾರಂಭ ಮಾಡಿದರೆ ಮಾತ್ರ ನಿಮಗೆ ಆರೈವಲ್ಸ್ ಎಷ್ಟು ಬರುತ್ತದೆ ಎಂಬುದು ಗೊತ್ತಾಗುತ್ತದೆ. ಖರೀದಿ ಕೇಂದ್ರವನ್ನು ಪ್ರಾರಂಭ ಮಾಡದೇ ಆರೈವಲ್ಸ್ ಅನ್ನು ನೋಡಿಕೊಂಡು ಖರೀದಿ ಕೆಂದ್ರವನ್ನು ಪ್ರಾರಂಭ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು. ಈಗ ಅಲ್ಲಿ ಖರೀದಿ ಕೇಂದ್ರವನ್ನು ಪ್ರಾರಂಭ ಮಾಡುವುದಕ್ಕೆ ತೊಂದರೆ ಏನಾಗಿದೆ?

ಶ್ರೀ ಡಿ.ಬಿ. ಇನಾಂದಾರ್ :— ರೈತರ ಉತ್ಪನ್ನಗಳು ಸಾಕಷ್ಟು ಇದ್ದು, ಇವತ್ತಿನ ದಿವಸ ಕೃಷಿ ಉತ್ಪನ್ನಗಳಿಗೆ ನಿಗದಿ ಮಾಡಿದ ಬೆಂಬಲ ಬೆಲೆಗಿಂತ ಕಡಿಮೆ ಬೆಲೆ ಆದಂತ ಸಂದರ್ಭದಲ್ಲಿ ಮಾರುಕಟ್ಟೆ ಪ್ರವೇಶ ಮಾಡಿ ಕೃಷಿ ಉತ್ಪನ್ನಗಳನ್ನು ಖರೀದಿ ಮಾಡತಕ್ಕಂಥ ಒಂದು ವ್ಯವಸ್ಥೆ ಇವತ್ತಿನ ದಿವಸ ಸರ್ಕಾರದ ಕಡೆಯಿಂದ ನಡೆಯುತ್ತಿದೆ. ಇವತ್ತಿನ ದಿವಸ ಯಾವ್ಯಾವ ಮಾರುಕಟ್ಟೆಗೆ ಗೋವಿನ ಜೋಳ ಎಷ್ಟು ಬಂದಿದೆ ಎಂಬುದರ ಬಗ್ಗೆ ಒಂದು ವಿವರಣೆಯನ್ನು ಮಾರುಕಟ್ಟೆ ಇಲಾಖೆಯವರು ಕೊಡುತ್ತಾರೆ. ಈ ವಿವರವನ್ನು ನೋಡಿಕೊಂಡು ನಾವು ಖರೀದಿ ಕೇಂದ್ರಗಳನ್ನು ಪ್ರಾರಂಭ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಕೆ. ಶ್ರೀನಿವಾಸಗೌಡ :— ಇವತ್ತಿನ ದಿವಸ ಹುಣಸೂರಿನಲ್ಲಿ ಎಫ್.ಸಿ.ಐ. ಗೋಡನ್ ಇದೆ. ಆದ್ದರಿಂದ, ರೈತರು ಬೆಳೆದಿರತಕ್ಕಂಥ ಫಸಲನ್ನು ಕೊನೆಗೆ ತೆಗೆದುಕೊಂಡು

ಇಲ್ಲಿಗೆ ಬರಬೇಕಾಗುತ್ತದೆ. ಆದರೆ ಇಲ್ಲಿ ಪರಿಸ್ಥಿತಿ ಹೇಗಿದೆ ಎಂದರೆ "ಕೊಂಕಣ ಸುತ್ತಿ ಮೈಲಾರ ಸೇರಿದಂತೆ ಆಗುತ್ತಿದೆ" ಹುಣಸೂರಿನಲ್ಲಿ ಗೋಡನ್ ಇರುವುದರಿಂದ ಇಲ್ಲಿಯೇ ಒಂದು ಖರೀದಿ ಕೇಂದ್ರವನ್ನು ಪ್ರಾರಂಭ ಮಾಡಿದರೆ ಸಾಗಾಣಿಕ ವೆಚ್ಚ ಕಡಿಮೆಯಾಗುತ್ತದೆ. ಇವತ್ತಿನ ದಿವಸ ಒಂದು ಕ್ವಿಂಟಲ್‌ಗೆ ಸುಮಾರು 400 ರಿಂದ 500 ರೂಪಾಯಿಗಳು ಸಿಗಲಿ, ಇದರಿಂದ ಏನು ತೊಂದರೆಯಾಗುವುದಿಲ್ಲ. ಇದರ ಬಗ್ಗೆ ಮಾನ್ಯ ಸಚಿವರು ಯೋಜನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಪಾಪಣ್ಣ :— ಇವತ್ತಿನ ದಿವಸ ಪಿರಿಯಾಪಟ್ಟಣದಲ್ಲಿ ಖರೀದಿ ಕೇಂದ್ರವನ್ನು ಪ್ರಾರಂಭ ಮಾಡಿ ಕೃಷಿ ಉತ್ಪನ್ನಗಳನ್ನು ಖರೀದಿ ಮಾಡುತ್ತಿದ್ದೀರಿ. ಇದರ ಬಗ್ಗೆ ನನಗೇನು ಆಭ್ಯಂತರವಿಲ್ಲ. ಆದರೆ ನಮ್ಮ ಹುಣಸೂರು ತಾಲ್ಲೂಕಿನಲ್ಲಿ ಎಫ್.ಸಿ.ಐ. ಗೋಡನ್ ವ್ಯವಸ್ಥೆ ಇರುವುದರಿಂದ ಇಲ್ಲೊಂದು ಖರೀದಿ ಕೇಂದ್ರವನ್ನು ಪ್ರಾರಂಭ ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :— ಮಾನ್ಯ ಸಚಿವರು ತಮ್ಮ ಕಛೇರಿಗೆ ಸನ್ಮಾನ್ಯ ಪಾಪಣ್ಣನವರನ್ನು ಕರೆಸಿ ಇದರ ಬಗ್ಗೆ ಚರ್ಚೆ ಮಾಡಿ.

ಶ್ರೀ ಡಿ.ಬಿ. ಇನಾಂದಾರ್ :— ಹುಣಸೂರಿನಲ್ಲಿ ಅವಶ್ಯಕತೆ ಇದ್ದರೆ ಖಂಡಿತಾಗಿಯೂ ಖರೀದಿ ಕೇಂದ್ರವನ್ನು ಪ್ರಾರಂಭ ಮಾಡಲಾಗುತ್ತದೆ ಎನ್ನತಕ್ಕಂಥ ಮಾತನ್ನು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಹೆಚ್.ಸಿ ಬಸವರಾಜ್ :— ಮಾನ್ಯ ಅಧ್ಯಕ್ಷರೆ, ಪಿರಿಯಾಪಟ್ಟಣದಲ್ಲಿ ಕಳೆದ 10 ದಿವಸಗಳಿಂದ ಮೆಕ್ಕೇಜೋಳವನ್ನು ಖರೀದಿ ಮಾಡುವುದಕ್ಕೋಸ್ಕರ ಖರೀದಿ ಸೆಂಟರ್‌ಗಳನ್ನು ಪ್ರಾರಂಭಮಾಡಿ ಮೆಕ್ಕೇಜೋಳವನ್ನು ಖರೀದಿ ಮಾಡತಕ್ಕಂಥ ಕೆಲಸ ಈಗ ನಡೆಯುತ್ತಿದೆ. ಸರ್ಕಾರದ ಒಂದು ನೀತಿಯಿಂದ ಇವತ್ತಿನ ದಿವಸ ಒಳ್ಳೆಯ ಕಾರ್ಯವನ್ನು ಮಾಡುತ್ತಿದ್ದಾರೆ. ಆದರೆ ಇದು ಎಷ್ಟರ ಮಟ್ಟಿಗೆ ಫಲಪ್ರದ ಆಗುತ್ತಿದೆ ಎಂಬುದನ್ನು ತಪಾಸಣೆ ಮಾಡುವುದಕ್ಕೆ ಸರ್ಕಾರದ ಕಡೆಯಿಂದ ಇದುವರೆಗೆ ಆಗಿಲ್ಲ. ಪಿರಿಯಾಪಟ್ಟಣದಲ್ಲಿ ರೈತರು ಖರೀದಿ ಕೇಂದ್ರಗಳ ಹತ್ತಿರ ಎರಡು-ಮೂರು ದಿಸಗಳಿಂದ ಫಸಲನ್ನು ತುಂಬಿರುವ ಲಾರಿ ಅಥವಾ ಗಾಡಿಗಳನ್ನು ನಿಲ್ಲಿಸಿಕೊಂಡು ಕಾಯುತ್ತಾ ಕುಳಿತುಕೊಂಡಿದ್ದಾರೆ. ಇದಕ್ಕೆ ಮುಖ್ಯ ಕಾರಣ ಏನೆಂದರೆ, ಇಲ್ಲಿರತಕ್ಕಂಥ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಹಾಗೆಯೇ ಎಫ್.ಸಿ.ಐ.ನವರಿಗೆ ಇದು ಬೇಕೆಬೇಕು ಅಥವಾ ಬೇಡವೇಬೇಡ ಎನ್ನತಕ್ಕಂಥ ರೀತಿಯಲ್ಲಿ ಅವರು ಇದ್ದಾರೆ. ಅವರು ಖರೀದಿ ಮಾಡುವುದಕ್ಕೆ ಆಸಕ್ತಿ ಇಲ್ಲದೇ ಇರುವುದರಿಂದ ಏನೋ ಒಂದು ಕಾರಣವನ್ನು ಹೇಳಿ ರಿಜೆಕ್ಟ್ ಮಾಡುತ್ತಿದ್ದಾರೆ. ರೈತರ ಬಗ್ಗೆ ಕಾಳಜಿ ವಹಿಸಿಕೊಳ್ಳುವುದಕ್ಕೋಸ್ಕರ ಕೃಷಿ ಇಲಾಖೆ ಅಥವಾ ಆಹಾರ ಇಲಾಖೆಯಾಗಲೀ ಅಥವಾ

ಮಾರುಕಟ್ಟೆ ಇಲಾಖೆಯ ಅಧಿಕಾರಿಗಳು ಅಲ್ಲಿ ಇದ್ದು ಎಷ್ಟು ಫಸಲನ್ನು ಖರೀದಿ ಮಾಡಿದ್ದಾರೆ ಎಂಬುದನ್ನು ಮತ್ತು ಕೆಲವು ಫಸಲನ್ನು ಯಾವ ಕಾರಣಕ್ಕಾಗಿ ತೆಗೆದುಕೊಂಡಿಲ್ಲ, ಎನ್ನತಕ್ಕಂಥದ್ದನ್ನು ಇದುವರೆಗೂ ರಾಜ್ಯ ಸರ್ಕಾರದ ವತಿಯಿಂದ ಯಾರೂ ಮಾಡುತ್ತಿಲ್ಲ. ಈಗಾಗಲೇ ಮಾನ್ಯ ಪಾಪಣ್ಣನವರು ಹೇಳಿದ ಪ್ರಕಾರ ಹುಣಸೂರು ತಾಲ್ಲೂಕಿನಿಂದ ಸಾವಿರಾರು ಕ್ವಿಂಟಲ್‌ನಷ್ಟು ಮೆಕ್ಕೇಜೋಳ ಪಿರಿಯಾಪಟ್ಟಣಕ್ಕೆ ಬರುತ್ತಿದೆ. ಇದನ್ನು ನಾನೇ ಖುದ್ದಾಗಿ ನೋಡಿದ್ದೇನೆ. ಆದ್ದರಿಂದ ಹುಣಸೂರಿನಲ್ಲಿ ಒಂದು ಖರೀದಿ ಕೇಂದ್ರವನ್ನು ಸ್ಥಾಪನೆ ಮಾಡಬೇಕು. ಹಾಗೆಯೇ ಪಿರಿಯಾಪಟ್ಟಣದಲ್ಲಿ ಇನ್ನೂ ಎರಡು ಖರೀದಿ ಕೇಂದ್ರಗಳನ್ನು ಪ್ರಾರಂಭ ಮಾಡಿದರೆ ರೈತರಿಗೆ ಅನುಕೂಲವಾಗುತ್ತದೆ. ಏಕೆಂದರೆ ಪಿರಿಯಾಪಟ್ಟಣದಲ್ಲಿ ಕೇವಲ ಒಂದು ಖರೀದಿ ಕೇಂದ್ರ ಇರುವುದರಿಂದ ರೈತರು ಎರಡು-ಮೂರು ದಿವಸ ತಾವು ತಂದಿರತಕ್ಕಂಥ ಫಸಲನ್ನು ಆದಷ್ಟು ಬೇಗ ಮಾರಾಟ ಮಾಡುವುದಕ್ಕೆ ಆಗದೇ ಕಂಬಳಿ ಹೊದ್ದಿಕೊಂಡು ಖರೀದಿ ಕೇಂದ್ರದ ಸಮೀಪ ಊಟ ಮಾಡಿಕೊಂಡು ಕಾಲ ಕಳೆಯುತ್ತಿದ್ದಾರೆ. ಈಗಾಗಲೇ ಸರ್ಕಾರ ತೆಗೆದುಕೊಂಡಿರತಕ್ಕ ಕ್ರಮಗಳನ್ನು ನಾನು ಅಭಿನಂದಿಸುತ್ತೇನೆ. ಆದರೆ, ನಾನು ಈಗಾಗಲೇ ಹೇಳಿರತಕ್ಕಂತ ಸಮಸ್ಯೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬುದನ್ನು ತಿಳಿಸಬೇಕು.

ಅಧ್ಯಕ್ಷರು :— ಹುಣಸೂರು ತಾಲ್ಲೂಕಿನ ಪಕ್ಕದ ತಾಲ್ಲೂಕಿನವರು ನೀವು ಎಂದು ನಿಮಗೆ ಅವಕಾಶ ಕೊಟ್ಟರೆ, ನೀವು ಪ್ರಶ್ನೆ ಕೇಳಿದರೆ ಹೇಗೆ?

ಶ್ರೀ ಕೆ.ಎಂ. ಕೃಷ್ಣಮೂರ್ತಿ :— ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಮೆಕ್ಕೇಜೋಳ ಮತ್ತು ಭತ್ತದ ಬೆಳೆಯ ಬಗ್ಗೆ ತಾವು ಮಾತನಾಡುವುದಕ್ಕೆ ಅವಕಾಶ ಕೊಡುತ್ತಿದ್ದೀರಿ ವಿನಹ ತೆಂಗು ಮತ್ತು ನೆಲಗಡಲೆ ಬೆಳೆದಿರತಕ್ಕಂಥ ಪ್ರದೇಶದವರಿಗೆ ಮಾತನಾಡಲು ಅವಕಾಶ ಕೊಡುತ್ತಿಲ್ಲ. ಅವತ್ತಿನ ದಿವಸ ತೆಂಗು ಮತ್ತು ನೆಲಗಡಲೆ ಉತ್ಪನ್ನಗಳ ಬೆಲೆಯೂ ಕೂಡ ಕುಸಿದಿರುವುದರಿಂದ ಇವುಗಳನ್ನು ಮಾಡುವುದಕ್ಕೆ ಖರೀದಿ ಕೇಂದ್ರವನ್ನು ಪ್ರಾರಂಭ ಮಾಡಬೇಕಾಗುತ್ತದೆ.

ಅಧ್ಯಕ್ಷರು :— ನೀವು ಮಾತನಾಡುವುದಕ್ಕೆ ಎದ್ದು ನಿಂತುಕೊಂಡು ಅವಕಾಶವನ್ನು ಕೇಳಿಲ್ಲ. ಆದ್ದರಿಂದ ಸುಮ್ಮನೆ ಏನೇನೋ ಮಾತನಾಡುವುದಕ್ಕೆ ಹೋಗಬೇಡಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :— ನಮ್ಮ ನೋವನ್ನು ನೀವು ಕೇಳದೆ ಇದ್ದರೆ, ಇನ್ಯಾರು ಹೇಳಬೇಕು?

ಅಧ್ಯಕ್ಷರು :— ಹುಣಸೂರಿನ ಬಗ್ಗೆ ಸಂಬಂದಪಟ್ಟಿರುವಂತಹದ್ದು ಏನಾದರೂ ಇದ್ದರೆ ಮಾತ್ರ ಮಾತನಾಡಿ

ಶ್ರೀ ಕೆ.ಎಂ. ಕೃಷ್ಣಮೂರ್ತಿ :— ರಾಜ್ಯದಲ್ಲಿರತಕ್ಕಂಥ ಎಲ್ಲಾ ಜಿಲ್ಲೆಗಳ ಬಗ್ಗೆ

ಮಾತನಾಡುವುದಕ್ಕೆ ತಾವು ಅವಕಾಶ ಕೊಡಬೇಕು. ತೆಂಗು ಮತ್ತು ನೆಲಗಡಲೆ ಕೃಷಿ ಉತ್ಪನ್ನಗಳ ಬಗ್ಗೆ ಸ್ವಲ್ಪ ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದರೂ ಸಹ ನೀವು ಅವಕಾಶ ನೀಡುತ್ತಿಲ್ಲ. ಇವತ್ತಿನ ದಿವಸ ಕಡೂರು ತಾಲ್ಲೂಕಿನಲ್ಲಿ ತೆಂಗಿನ ಬೆಲೆ ಬಹಳ ಕುಸಿದಿದೆ,

ಅಧ್ಯಕ್ಷರು :— ಕಡೂರು ತಾಲ್ಲೂಕಿಗೆ ಸಂಬಂಧಪಟ್ಟ ವಿಷಯವನ್ನು ಮಾತನಾಡುವುದಕ್ಕೆ ನಾನು ಅವಕಾಶ ಕೊಡುವುದಿಲ್ಲ, ಹುಣಸೂರಿಗೆ ಸಂಬಂಧಪಟ್ಟ ವಿಷಯಗಳು ಇದ್ದರೆ ಮಾತ್ರ ಮಾತನಾಡಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :— ರೈತರ ಸಮಸ್ಯೆ ಬಗ್ಗೆ ಮಾತನಾಡುವುದಕ್ಕೆ ತಾವು ಅವಕಾಶ ಕೊಡದೇ ಇದ್ದರೆ ನಾವು ಶಾಸಕರಾಗಿ ಏನು ಮಾಡಬೇಕು.

ಅಧ್ಯಕ್ಷರು :— ರೈತರ ಕೃಷಿ ಉತ್ಪನ್ನಗಳ ಬೆಲೆ ಕುಸಿತದ ಬಗ್ಗೆ ಇನ್ನೂ ಚರ್ಚೆ ಮಾಡಬೇಕಾಗಿದೆ. ಆದ್ದರಿಂದ ಆ ಸಂದರ್ಭದಲ್ಲಿ ಈ ವಿಷಯವನ್ನು ತಾವು ಪ್ರಸ್ತಾಪ ಮಾಡಬಹುದು.

ಶ್ರೀ ಡಿ.ಬಿ. ಇನಾಂದಾರ್ :— ಮಾನ್ಯ ಅಧ್ಯಕ್ಷರೆ, 18ನೇ ತಾರೀಖಿನವರೆಗೆ ಸರ್ಕಾರ ಮಾರುಕಟ್ಟೆ ಪ್ರವೇಶ ಮಾಡಿ ಸುಮಾರು ೭೭,೬೨೦ ಕ್ವಿಂಟಲ್‌ನಷ್ಟು ಮೆಕ್ಕೇಜೊಳವನ್ನು ಖರೀದಿ ಮಾಡಿದೆ. ಮಾನ್ಯ ಸದಸ್ಯರು ಹೇಳಿದ ಪ್ರಕಾರ ಹುಣಸೂರಿನಲ್ಲಿ ಅವಶ್ಯ ಬಿದ್ದರೆ ಜರೂರಾಗಿ ಖರೀದಿ ಕೇಂದ್ರವನ್ನು ಪ್ರಾರಂಭ ಮಾಡುತ್ತೇವೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ :— ಇವತ್ತಿನ ದಿವಸ ಮಾರುಕಟ್ಟೆಗೆ ಕೃಷಿ ಉತ್ಪನ್ನಗಳು ಹೇರಳವಾಗಿ ಬಂದಿದೆ. ಆದ್ದರಿಂದ ತಾವು ಇದನ್ನು ಪರಿಶೀಲನೆ ಮಾಡಿ ತಕ್ಷಣ ಹುಣಸೂರಿನಲ್ಲಿ ಮಾರುಕಟ್ಟೆ ಪ್ರವೇಶ ಮಾಡಿ, ಫಸಲನ್ನು ಖರೀದಿ ಮಾಡತಕ್ಕಂಥ ಕಾರ್ಯವನ್ನು ಆದಷ್ಟು ಬೇಗ ಮಾಡಿದರೆ ಒಳ್ಳೆಯದು.

ಶ್ರೀ ಡಿ.ಬಿ. ಇನಾಂದಾರ್ :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಜೊತೆ ಈ ವಿಷಯವನ್ನು ಚರ್ಚೆ ಮಾಡುತ್ತೇನೆ.

ಅಧ್ಯಕ್ಷರು :— ಮಾನ್ಯ ಕೃಷ್ಣಮೂರ್ತಿಯವರೆ, ನಿಮ್ಮ ಪ್ರಶ್ನೆಯನ್ನು ನಾಳೆ ದಿವಸ ತೆಗೆದುಕೊಳ್ಳುತ್ತೇನೆ. ಕಾರಣ ಏನೆಂದರೆ, ಮಾನ್ಯ ಕಂದಾಯ ಸಚಿವರು ನಾಳೆ ಬರುತ್ತಾರೆ, ಆದ್ದರಿಂದ ನಾಳೆ ದಿವಸ ನಿಮ್ಮ ಪ್ರಶ್ನೆಯನ್ನು ತೆಗೆದುಕೊಳ್ಳುತ್ತೇನೆ.